# ಹೊಚ್ಚಹೊಸ ಫ್ಲಿಪ್‌ಕಾರ್ಟ್ ಹೆಲ್ತ್+ ಆ್ಯಪ್ ಮೂಲಕ ಫ್ಲಿಪ್‌ಕಾರ್ಟ್ ಆರೋಗ್ಯಸೇವಾ ವಲಯಕ್ಕೆ ಪ್ರವೇಶ

*-ಭಾರತದ ಗ್ರಾಹಕರಿಗೆ 20,000ಕ್ಕೂ ಹೆಚ್ಚು ಪಿನ್ ಕೋಡ್‌ಗಳಲ್ಲಿ ವಿಸ್ತಾರ ಶ್ರೇಣಿಯ ಗುಣಮಟ್ಟದ ಹಾಗೂ ಕೈಗೆಟುಕುವ ಔಷಧಗಳು ಹಾಗೂ ಆರೋಗ್ಯಸೇವಾ ಉತ್ಪನ್ನಗಳ ಲಭ್ಯತೆ ಮೂಲಕ 'ಸ್ವಾಸ್ಥ್ ಭಾರತ್'ಗೆ ಕೊಡುಗೆಯ ಗುರಿ*

*-ಅಧಿಕೃತ ಔಷಧಗಳು ಮತ್ತು ಆರೋಗ್ಯಸೇವಾ ಉತ್ಪನ್ನಗಳ ಲಭ್ಯತೆಯ ಅಂತರ ಪರಿಹರಿಸಲು ದೇಶದ ಕುಗ್ರಾಮಗಳಲ್ಲೂ ದೊರೆಯುವಂತೆ ಮಾಡುವ ಮೂಲಕ ಆರೋಗ್ಯಸೇವಾ ವ್ಯವಸ್ಥೆಯ ಸಹಯೋಗ ಮತ್ತು ಸದೃಢಗೊಳಿಸುವ ಗುರಿ*

**ಬೆಂಗಳೂರು, ಏಪ್ರಿಲ್ 6, 2022**: ಭಾರತದ ಸ್ಥಳೀಯವಾಗಿ ಬೆಳೆದ ಫ್ಲಿಪ್‌ಕಾರ್ಟ್ ಸಮೂಹವು ಡಿಜಿಟಲ್ ಆರೋಗ್ಯಸೇವಾ ಮಾರ್ಕೆಟ್‌ಪ್ಲೇಸ್ ಪ್ಲಾಟ್‌ಫಾರಂನ ಫ್ಲಿಪ್‌ಕಾರ್ಟ್ ಹೆಲ್ತ್+ ಇಂದು ಫ್ಲಿಪ್‌ಕಾರ್ಟ್ ಹೆಲ್ತ್+ ಆ್ಯಪ್ ಬಿಡುಗಡೆ ಮಾಡಿದ್ದು ಇದು ದೇಶಾದ್ಯಂತ ಲಕ್ಷಾಂತರ ಮಂದಿ ಗ್ರಾಹಕರಿಗೆ ಅಧಿಕೃತ ಔಷಧಗಳು ಹಾಗೂ ಆರೋಗ್ಯಸೇವಾ ಉತ್ಪನ್ನಗಳು ಹಾಗೂ ಸೇವೆಗಳನ್ನು ಒದಗಿಸುತ್ತದೆ. ಭಾರತದಲ್ಲಿ 20,000 ಪಿನ್ ಕೋಡ್‌ಗಳಿಗೆ ಗ್ರಾಹಕರಿಗೆ ಪೂರೈಸುವ ಉದ್ದೇಶದಿಂದ ಫ್ಲಿಪ್‌ಕಾರ್ಟ್ ಹೆಲ್ತ್+ ಸುಲಭ ಮತ್ತು ಅನುಕೂಲಕರವಾದ ಗುಣಮಟ್ಟದ ಹಾಗೂ ಕೈಗೆಟುಕುವ ಔಷಧಗಳು ಹಾಗೂ ಆರೋಗ್ಯಸೇವಾ ಉತ್ಪನ್ನಗಳನ್ನು ಸ್ವತಂತ್ರ ಮಾರಾಟಗಾರರಿಂದ ಫ್ಲಿಪ್‌ಕಾರ್ಟ್ ಹೆಲ್ತ್+ ಆ್ಯಪ್ ಮೂಲಕ ಒದಗಿಸುತ್ತದೆ.

ಫ್ಲಿಪ್‌ಕಾರ್ಟ್ ಹೆಲ್ತ್+ ಫ್ಲಿಪ್‌ಕಾರ್ಟ್ ಸಮೂಹದ ಸಾಮರ್ಥ್ಯ ಮತ್ತು ಅನುಭವದಿಂದ ಹಾಗೂ ವಿಸ್ತಾರ ಕೊನೆಯ ಹಂತದ ಪೂರೈಕೆ ಸರಣಿ ಸಾಮರ್ಥ್ಯಗಳನ್ನು ಸಸ್ತಾಸುಂದರ್.ಕಾಂ(Sastasundar.com)ನ ಸದೃಢ ಆರೋಗ್ಯಸೇವಾ ಜಾಲದೊಂದಿಗೆ ನೀಡುತ್ತದೆ. ಇದು ಭಾರತದ ಆರೋಗ್ಯಸೇವಾ ಇಕೊಸಿಸ್ಟಂ ಅನ್ನು ವಿಸ್ತಾರ ಶ್ರೇಣಿಯ ಔಷಧಗಳು ಮತ್ತು ಆರೋಗ್ಯಸೇವಾ ಉತ್ಪನ್ನಗಳು ಹಾಗೂ ಸೇವೆಗಳ ಮೂಲಕ ಸನ್ನದ್ಧಗೊಳಿಸುವುದಲ್ಲದೆ ದೀರ್ಘಾವಧಿ ಸ್ವಾಸ್ಥ್ಯ ಮತ್ತು ಸಾಮಾಜಿಕ ಅಭಿವೃದ್ಧಿಯ ಆರೋಗ್ಯಸೇವಾ ಇಕೊಸಿಸ್ಟಂನೊಂದಿಗೆ ಸಹಯೋಗ ಹೊಂದುತ್ತದೆ.

ಫ್ಲಿಪ್‌ಕಾರ್ಟ್ ಹೆಲ್ತ್+ ಆ್ಯಪ್ ಬಿಡುಗಡೆ ಕುರಿತು ಫ್ಲಿಪ್‌ಕಾರ್ಟ್ ಹೆಲ್ತ್+ನ ಚೀಫ್ ಎಕ್ಸಿಕ್ಯೂಟಿವ್ ಆಫೀಸರ್ ಶ್ರೀ ಪ್ರಶಾಂತ್ ಝುವೇರಿ, "ಕೋವಿಡ್-19 ಸಾಂಕ್ರಾಮಿಕ ಪ್ರಾರಂಭವಾದ ದಿನದಿಂದಲೂ ಭಾರತೀಯರು ಸ್ವಾಸ್ಥ್ಯಕ್ಕೆ ಆದ್ಯತೆ ನೀಡುವ ಹಾಗೂ ರೋಗತಡೆಯ ಆರೋಗ್ಯಸೇವೆಯಲ್ಲಿ ಅಪಾರ ಬದಲಾವಣೆ ಕಂಡಿದ್ದಾರೆ ಮತ್ತು ಆರೋಗ್ಯ ಮತ್ತು ಸ್ವಾಸ್ಥ್ಯಕ್ಕೆ ಹಿಂದೆಂದೂ ಕಾಣದಂತಹ ಆದ್ಯತೆ ಹೆಚ್ಚಾಗಿದೆ. ಫ್ಲಿಪ್‌ಕಾರ್ಟ್ ಹೆಲ್ತ್+ ಮೂಲಕ ನಾವು ಅಧಿಕೃತ ಔಷಧಗಳು ಮತ್ತು ಆರೋಗ್ಯಸೇವೆಯ ಉತ್ಪನ್ನಗಳು ಹಾಗೂ ಸೇವೆಗಳು ದೇಶಾದ್ಯಂತ ದೊರೆಯುವಲ್ಲಿ ಪ್ರಮುಖ ಅಂತರವನ್ನು ಅದರಲ್ಲಿಯೂ ಇಂದಿಗೂ ದುರ್ಲಭವಾಗಿರುವ ಅತ್ಯಂತ ಕುಗ್ರಾಮಗಳಲ್ಲಿ ಹಿಂದೆಂದೂ ಇಲ್ಲದಂತೆ ತುಂಬುವ ಗುರಿ ಹೊಂದಿದ್ದೇವೆ. ಆರೋಗ್ಯಸೇವಾ ವ್ಯವಸ್ಥೆಯನ್ನು ಸದೃಢಗೊಳಿಸುವಲ್ಲಿ ತಂತ್ರಜ್ಞಾನವನ್ನು ಅಳವಡಿಸುವ ಬಯಕೆ ಹೊಂದಿದ್ದೇವೆ ಮತ್ತು ಗ್ರಾಹಕರಿಗೆ ಆರೋಗ್ಯಸೇವಾ ವ್ಯವಸ್ಥೆಯನ್ನು ಸದೃಢಗೊಳಿಸುವ ಮತ್ತು ಅದು ದೇಶದ ದೂರ ಪ್ರದೇಶಗಳಲ್ಲಿ ವಾಸಿಸುವವರಿಗೂ ಸೇವೆ ಒದಗಿಸುವಂತೆ ಲಭ್ಯತೆ ಇರುವಂತೆ ಮಾಡುವ ಮತ್ತು ಆರೋಗ್ಯಕರ ಭಾರತದತ್ತ ಕೊಡುಗೆ ನೀಡುವ ಉದ್ದೇಶ ಹೊಂದಿದ್ದೇವೆ" ಎಂದರು.

ಫ್ಲಿಪ್‌ಕಾರ್ಟ್ ಹೆಲ್ತ್+ ಆ್ಯಪ್ ಅನ್ನು ಬಳಕೆದಾರ ಸ್ನೇಹಿ ಇಂಟರ್‌ಫೇಸ್ ಮೂಲಕ ವಿನ್ಯಾಸ ಮತ್ತು ಅಭಿವೃದ್ಧಿಪಡಿಸಲಾಗಿದ್ದು ಅದು ಗ್ರಾಹಕರಿಗೆ ಅವರ ತಂತ್ರಜ್ಞಾನದ ಪ್ರಾವೀಣ್ಯತೆ ಹೇಗೇ ಇರಲಿ ಇಷ್ಟವಾಗುತ್ತದೆ. ಸದೃಢ ತಂತ್ರಜ್ಞಾನ ಮತ್ತು ಲಾಜಿಸ್ಟಿಕ್ಸ್ ಮೂಲೌಕರ್ಯ ಹೊಂದಿರುವ ಫ್ಲಿಪ್‌ಕಾರ್ಟ್ ಹೆಲ್ತ್+ ನಿಯಂತ್ರಣದ ಚೌಕಟ್ಟಿಗೆ ಅನುಗುಣವಾಗಿ ತೀವ್ರ ಹಾಗೂ ಗಂಭೀರ ಅನಾರೋಗ್ಯಗಳನ್ನು ವಿವಿಧ ಆರೋಗ್ಯ ಪರಿಸ್ಥಿತಿಗೆ ಔಷಧಗಳು ಮತ್ತು ಆರೋಗ್ಯಸೇವಾ ಉತ್ಪನ್ನಗಳು ಹಾಗೂ ಸೇವೆಗಳನ್ನು ಭಾರತದಾದ್ಯಂತ ಅದರಲ್ಲಿಯೂ ಸಾಂಪ್ರದಾಯಿಕವಾಗಿ ತಲುಪದಂತಹ ಹೆಚ್ಚು ಗ್ರಾಹಕರಿಗೆ ಒದಗಿಸುತ್ತದೆ.

ಪ್ರಾರಂಭಕ್ಕೆ ಫ್ಲಿಪ್‌ಕಾರ್ಟ್ ಹೆಲ್ತ್+ ಪ್ಲಾಟ್‌ಫಾರಂ 500+ ನೋಂದಾಯಿತ ಫಾರ್ಮಸಿಸ್ಟ್‌ಗಳ ಮಾರಾಟಗಾರರ ಜಾಲ ಹೊಂದಿದ್ದು ಅವರು ನಿಖರವಾದ ಔಷಧಗಳ ವಿತರಣೆಗೆ ಔಷಧ ಸಲಹೆಗಳನ್ನು ದೃಢೀಕರಿಸುತ್ತಾರೆ. ಇದು ಮಧ್ಯವರ್ತಿ ಮಾರ್ಕೆಟ್‌ಪ್ಲೇಸ್ ಪ್ಲಾಟ್‌ಫಾರಂ ಆದರೂ ಫ್ಲಿಪ್‌ಕಾರ್ಟ್ ಹೆಲ್ತ್+ ವಿವಿಧ ಬಗೆಯ ಗುಣಮಟ್ಟದ ಪರೀಕ್ಷೆಗಳು ಮತ್ತು ಪರಿಶೀಲನೆಯ ನಿಯಮಗಳನ್ನು ಹೊಂದಿದ್ದು ಅದು ಅಧಿಕೃತ ಔಷಧಗಳು ಮತ್ತು ಸ್ವತಂತ್ರ ಮಾರಾಟಗಾರರಿಂದ ಆರೋಗ್ಯಸೇವಾ ಉತ್ಪನ್ನಗಳನ್ನು ಮಾತ್ರ ಗ್ರಾಹಕರ ಮನೆಬಾಗಿಲಿಗೆ ಪೂರೈಸುತ್ತದೆ. ಮುಂದಿನ ತಿಂಗಳುಗಳಲ್ಲಿ ಫ್ಲಿಪ್‌ಕಾರ್ಟ್ ಹೆಲ್ತ್+ ಟೆಲಿಕನ್ಸಲ್ಟೇಷನ್ ಮತ್ತು ಇ-ಡಯಾಗ್ನೊಸ್ಟಿಕ್ಸ್‌ನಂತಹ ಸೇವೆಗಳನ್ನು ಗ್ರಾಹಕರಿಗೆ ಒದಗಿಸುವ ಇತರೆ ಮೌಲ್ಯಾಧಾರಿತ ಸೇವೆಗಳನ್ನು ಒಳಗೊಂಡು ತೃತೀಯ ಪಕ್ಷದ ಆರೋಗ್ಯಸೇವಾ ಪೂರೈಕೆದಾರರನ್ನು ಒಳಗೊಳ್ಳಲಿದೆ.

ಆರೋಗ್ಯಸೇವೆಯು ಆದಾಯಗಳು ಮತ್ತು ಉದ್ಯೋಗ ಎರಡೂ ದೃಷ್ಟಿಯಿಂದ ಭಾರತೀಯ ಅರ್ಥವ್ಯವಸ್ಥೆಯಲ್ಲಿ ಅತ್ಯಂತ ದೊಡ್ಡ ವಲಯವಾಗಿದೆ. ಭಾರತದಲ್ಲಿ ಡಿಜಿಟಲ್ ಅಳವಡಿಕೆ ಹೆಚ್ಚಾಗುತ್ತಿರುವುದು ದೇಶಾದ್ಯಂತ ವಿಸ್ತಾರ ಔಷಧಗಳು ಮತ್ತು ಆರೋಗ್ಯಸೇವಾ ಉತ್ಪನ್ನಗಳು ದೊರೆಯುವಂತೆ ಮಾಡುವುದಕ್ಕೆ ಒಂದು ಅವಕಾಶವಾಗಿದೆ.

ಪ್ರಾರಂಭಿಕವಾಗಿ ಆಂಡ್ರಾಯಿಡ್ ಪ್ಲೇಸ್ಟೋರ್‌ನಲ್ಲಿ ಲಭ್ಯವಿದ್ದು ಭವಿಷ್ಯದಲ್ಲಿ ಐಒಎಸ್‌ನಲ್ಲಿ ಕೂಡಾ ಲಭ್ಯವಾಗುವಂತೆ ಮಾಡಲಿರುವ ಫ್ಲಿಪ್‌ಕಾರ್ಟ್ ಹೆಲ್ತ್+ ಆ್ಯಪ್ ಅನ್ನು ಕಡಿಮೆ ಬ್ಯಾಂಡ್‌ವಿಡ್ತ್‌ನಲ್ಲೂ ಬಳಸಬಹುದು, ಇದರಿಂದ ದೇಶಾದ್ಯಂತ ಇದು ಗ್ರಾಹಕರಿಗೆ ಲಭ್ಯವಾಗುವಂತೆ ಮಾಡಿದೆ.

## About Flipkart Health+

Flipkart Health+ is the digital healthcare marketplace platform that is a part of the Flipkart Group - India’s homegrown consumer internet ecosystem. Flipkart Health+ aims to provide millions of customers across the country access to quality and affordable healthcare through genuine medicines and healthcare products delivered to them. Flipkart Group acquired a majority stake in SastaSundar.com marketplace platform in 2021 to synergise its in-depth expertise to enable customers with high-quality medicines and healthcare products and services in the health-tech ecosystem through Flipkart Health+. The platform would benefit from the experience and expertise of the Flipkart Group, which includes its pan-India reach and technology capabilities, along with SastaSundar.com’s in-depth expertise to provide customers with an array of genuine offerings in the health-tech ecosystem.

**For more information, please contact media@flipkart.com**

**For media queries, please contact Ruder Finn –**


| | |
|---|---|
| Swati Chauhan<br>chauhans@ruderfinnasia.com / 8505947705 | Medha Banerjee<br>banerjeem@RuderFinnAsia.com / 9874393817 |